21-8-2007

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ವಿಷಯ: ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯ ಅನುಷ್ಠಾನ-ನೌಕರರ ಕೊಡುಗೆಗಳ ಹಾಗೂ ಕವಿಪ್ರನಿನಿ/ ಎಸ್ಕಾಂಗಳ ಸರಿಸಮಾನವಾದ ಕೊಡುಗೆಯ ಲೆಕ್ಕ ನಿರ್ವಹಣಾ ವಿಧಾನ.

---

**ಓದಲಾಗಿದೆ :**

1. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ವಿಶೇಷ) 04 ಪಿಇಟಿ 2005, ದಿನಾಂಕ: 31-03-2006.
2. ಸರ್ಕಾರಿ ಆದೇಶ ಸಂ. : ಆಇ 79 ಟಿಎಆರ್ 2006 ದಿನಾಂಕ : 16-06-2007.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05-07-2007.

**ಪ್ರಸ್ತಾವನೆ :**

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ವಿಶೇಷ) 04 ಪಿಇಟಿ 2005, ದಿನಾಂಕ: 31-03-2006 ರಲ್ಲಿ ವ್ಯಾಖ್ಯಾನಿಸಿದ ಪ್ರಯೋಜನಾತ್ಮಕ ವಿಶ್ರಾಂತಿ ವೇತನ (Defined Benefit Pension Scheme) ಯೋಜನೆಯ ಹಾಲಿ ವ್ಯವಸ್ಥೆಗೆ ಬದಲಾಗಿ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯನ್ನು (New Defined Contributory Pension Scheme) 01-04-2006ರಿಂದ ಅನ್ವಯವಾಗುವಂತೆ ಜಾರಿಗೆ ತರಲಾಗಿದೆ. ಸದರಿ ಸರ್ಕಾರಿ ಆದೇಶವನ್ನು ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05-07-2007 ರಲ್ಲಿ ಅಳವಡಿಸಿಕೊಳ್ಳಲಾಗಿದೆ. ತದನಂತರ ಸರ್ಕಾರಿ ಆದೇಶ ಸಂ : ಆಇ 79 ಟಿಎಆರ್ 2006 ದಿನಾಂಕ : 16-06-2007 ರಲ್ಲಿ ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ, ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ವಿವರವಾದ ಮಾರ್ಗಸೂಚಿಯನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ, ಕವಿಪ್ರನಿನಿ/ಎಸ್ಕಾಂಗಳು, ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಪಾಲಿಸಬೇಕಾದ ಮಾರ್ಗಸೂಚಿಯ ವಿವರಗಳನ್ನು ಈ ಆದೇಶವು ಒಳಗೊಂಡಿರುತ್ತದೆ. 1ನೇ ಏಪ್ರಿಲ್, 2006 ರಂದು ಅಥವಾ ತರುವಾಯ ಕವಿಪ್ರನಿನಿ/ಎಸ್ಕಾಂಗಳ ಸೇವೆಗೆ ಸೇರುವ ಎಲ್ಲಾ ಹೊಸ ಖಾಯಂ ನೇಮಕಾತಿದಾರರಿಗೆ ಈ ಯೋಜನೆಯು ಕಡ್ಡಾಯವಾಗಿದೆ. ನಿಯತ ಕೇಂದ್ರಿಯ ದಾಖಲೆ ನಿರ್ವಹಣಾ ಏಜೆನ್ಸಿಯನ್ನು ಹಾಗೂ ವಿಶ್ರಾಂತಿ ವೇತನ ನಿಧಿ ವ್ಯವಸ್ಥಾಪಕರನ್ನು ನೇಮಕ ಮಾಡುವವರೆಗೆ ಹಾಗೂ ಪ್ರತಿಯೊಬ್ಬ ವ್ಯಕ್ತಿಗತ ನೌಕರನ ಲೆಕ್ಕದಲ್ಲಿನ ಸಂಚಿತ ಶಿಲ್ಕುಗಳನ್ನು ಅವರಿಗೆ ವರ್ಗಾವಣೆ ಮಾಡುವವರೆಗೆ ಕವಿಪ್ರನಿನಿ/ಎಸ್ಕಾಂಗಳ ನೌಕರರು ಸಂದಾಯ ಮಾಡಿದ ಕೊಡುಗೆಗಳನ್ನು ಹಾಗೂ ಕವಿಪ್ರನಿನಿ/ಎಸ್ಕಾಂಗಳು ಸಂದಾಯ ಮಾಡಿದ ಸರಿಸಮನಾದ ಕೊಡುಗೆಯನ್ನು ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳು ನಿರ್ವಹಿಸಬೇಕಾಗುತ್ತದೆ. ಇದು ಸಂಪೂರ್ಣವಾಗಿ ತಾತ್ಕಾಲಿಕ ವ್ಯವಸ್ಥೆಯಾಗಿದೆ.

ಈ ತಾತ್ಕಾಲಿಕ ವ್ಯವಸ್ಥೆ ಅವಧಿಯಲ್ಲಿ ಹೊಸ ಯೋಜನೆಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ಲೆಕ್ಕ ನಿರ್ವಹಣಾ ವಿಧಾನಗಳನ್ನು ರೂಪಿಸಬೇಕಾಗಿರುತ್ತದೆ. ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು ಹಾಗೂ ಟ್ರಸ್ಟ್‌ಗಳು ಅವುಗಳನ್ನು ಪಾಲಿಸಬೇಕಾಗುತ್ತದೆ. ಆದ್ದರಿಂದ ಈ ಆದೇಶ ಹೊರಡಿಸಲಾಗಿದೆ:

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ಬೆಂಗಳೂರು ದಿನಾಂಕ: 21.08.2007**

1. ತಿಂಗಳ 1ನೇ ದಿನಾಂಕದಂದು ಸೇವೆಗೆ ಸೇರಿದ ಮತ್ತು ಪೂರ್ಣ ತಿಂಗಳ ವೇತನ ತೆಗೆಯಲಾಗಿರುವ ಕವಿಪ್ರನಿನಿ/ಎಸ್ಕಾಂಗಳ ನೌಕರನ ಸಂದರ್ಭದಲ್ಲಿ 1ನೇ ಹಂತದ ಕೊಡುಗೆಯಾಗಿ ಕಟಾವಣೆಯನ್ನು ಆ ತಿಂಗಳ

47

ವೇತನದಿಂದ ಪ್ರಾರಂಭಿಸತಕ್ಕದ್ದು. ಉದಾಹರಣೆಗೆ, 1ನೇ ಏಪ್ರಿಲ್, 2006ರಂದು ಸೇವೆಗೆ ಸೇರುವ ನೌಕರನಿಗೆ 1ನೇ ಹಂತದ ಕೊಡುಗೆಗಾಗಿ ಕಟಾವಣೆಯನ್ನು 2006ರ ಏಪ್ರಿಲ್ ತಿಂಗಳ ವೇತನದಿಂದ ಪ್ರಾರಂಭಿಸತಕ್ಕದ್ದು. ಏಪ್ರಿಲ್2, 2006ರಂದು ಸೇವೆಗೆ ಸೇರಿದ ನೌಕರನ ಸಂದರ್ಭದಲ್ಲಿ ಏಪ್ರಿಲ್, 2006ರ ವೇತನದಿಂದ ಯಾವುದೇ ಕಟಾವಣೆ ಮಾಡತಕ್ಕದ್ದಲ್ಲ.

2. ನಿಯತ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿಯನ್ನು ರಚಿಸುವವರೆಗೆ, ಕವಿಪ್ರನಿನಿ/ಎಸ್ಕಾಂಗಳ ಪಿಂಚಣಿ ಮತ್ತು ಉಪದಾನ ಟ್ರಸ್‌ಗಳು ಮೇಲಿನ ಯೋಜನೆಯ ಕೇಂದ್ರಿಯ ದಾಖಲೆ ನಿರ್ವಹಣಾ ಏಜೆನ್ಸಿಯಾಗಿ ಕಾರ್ಯನಿರ್ವಹಿಸತಕ್ಕದ್ದು. ಇವರು ಈ ಯೋಜನೆಗೆ ಸಂಬಂಧಿಸಿರುವ ದಾಖಲೆಗಳನ್ನು ಗಣಕೀಕೃತ ಡೇಟಾಬೇಸ್ ಹಾಗೂ ಹಾರ್ಡ್ ಪ್ರತಿ ಎರಡರಲ್ಲೂ ಇಡತಕ್ಕದ್ದು. ಇವರು ಈ ದಾಖಲೆಗಳ ಅವಶ್ಯ ಗಣಕೀಕರಣವಾಗುವಂತೆ ನೋಡಿಕೊಳ್ಳತಕ್ಕದ್ದು.

3. ನಿಗಮದ ಸೇವೆಗೆ ಸೇರಿದ ಕೂಡಲೇ, ನೌಕರನು ತನ್ನ ಹೆಸರು, ಪದನಾಮ, ವೇತನ ಶ್ರೇಣಿ, ಜನ್ಮ ದಿನಾಂಕ, ನಿಧಿಗೆ ನಾಮ ನಿರ್ದೇಶಿತ(ರು), ನಾಮದರ್ಶೇಶಿತನೊಂದಿಗೆ ನೌಕರನಿಗಿರುವ ಸಂಬಂಧ ಮುಂತಾದ ವಿವರಗಳನ್ನು ಗೊತ್ತುಪಡಿಸಿದ ನಮೂನೆ (ಅನುಬಂಧ-I) ರಲ್ಲಿ ಒದಗಿಸತಕ್ಕದ್ದು. ಈ ವಿವರಗಳನ್ನು ನೌಕರನ ಸೇವಾಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ಸಂಬಂಧಪಟ್ಟ ಹಣ ತೆಗೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿಯು, ಹೊಸ ವಿಶ್ರಾಂತಿ ವೇತನ ಯೋಜನೆ ಅಡಿ ಬರುವ ಎಲ್ಲಾ ನೌಕರರರಿಂದ ಈ ಮಾಹಿತಿ ಪಡೆಯುವುದಕ್ಕೆ ಜವಾಬ್ದಾರನಾಗಿರತಕ್ಕದ್ದು. ದಿನಾಂಕ 31-07-2007 ರಲ್ಲಿರುವಂತೆ ಹೊಸ ಯೋಜನೆ ಅಡಿ ಬರುವ, 1-04-2006 ರಂದು ಮತ್ತು ನಂತರ ಸೇವೆಗೆ ಸೇರಿದ ಎಲ್ಲಾ ನೌಕರರ ಮಾಹಿತಿಯಿರುವ ಅನುಬಂಧ-Iನ್ನು ಮೊದಲಿಗೆ ತಯಾರಿಸಿ ನಿಗಮದ/ ಎಸ್ಕಾಂಗಳ ಸಂಬಂಧ ಪಟ್ಟ ಆರ್ಥಿಕ ಸಲಹೆಗಾರರ ಕಛೇರಿಗೆ ರವಾನಿಸತಕ್ಕದ್ದು. (ಈ ಪಟ್ಟಿಯನ್ನು ದಿನಾಂಕ 16-08-2007ರ ಒಳಗೆ ತಲುಪುವಂತೆ ಸಂಬಂಧ ಪಟ್ಟ ಆರ್ಥಿಕ ಸಲಹೆಗಾರರ ಕಛೇರಿಗೆ ಕಳುಹಿಸುವುದು) 31-07-07ರ ನಂತರ ಸೇವೆಗೆ ಸೇರುವ ನೌಕರರ ವಿಷಯದಲ್ಲಿ ಪ್ರತಿ ತಿಂಗಳಿಗೊಮ್ಮೆ ಅನುಬಂಧ-Iರ ಅನ್ವಯ ಮಾಹಿತಿಯನ್ನು ಸಂಬಂಧ ಪಟ್ಟ ಆರ್ಥಿಕ ಸಲಹೆಗಾರರ ಕಛೇರಿಗೆ ರವಾನಿಸತಕ್ಕದ್ದು. ಅನುಬಂಧ-Iರ ಒಂದು ಪ್ರತಿಯನ್ನು ಹಣ ತೆಗೆಯುವ ಬಟವಾಡೆ ಮಾಡುವ ಅಧಿಕಾರಿಯು ತನ್ನಲ್ಲೇ ಉಳಿಸಿಕೊಳ್ಳತಕ್ಕದ್ದು.

4. ಈ ರೀತಿ ಎಲ್ಲಾ ಹಣ ತೆಗೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿಗಳಿಂದ ಪಡೆದ ಅನುಬಂಧ-Iನ್ನು ಕವಿಪ್ರನಿನಿ/ಎಸ್ಕಾಂಗಳ ಆರ್ಥಿಕ ಸಲಹೆಗಾರರ ಕಛೇರಿಗಳು ಕ್ರೋಢೀಕರಿಸಿ, ಕ್ರೋಢೀಕರಿಸಿದ ಅನುಬಂಧಗಳನ್ನು ತರುವಾಯದ ತಿಂಗಳ 10ನೇ ದಿನಾಂಕಕ್ಕೆ ಮುಂಚೆ ಟ್ರಸ್ಟ್‌ಗಳಿಗೆ ರವಾನಿಸತಕ್ಕದ್ದು.(ಮೊದಲ ಪಟ್ಟಿಯನ್ನು ದಿನಾಂಕ 25-08-2007ರ ಒಳಗೆ ತಲುಪುವಂತೆ ಟ್ರಸ್ಟ್‌ಗಳ ಕಛೇರಿಗೆ ಕಳುಹಿಸುವುದು).

5. ಟ್ರಸ್ಟ್‌ಗಳು ಅನುಬಂಧ-Iನ್ನಾಧರಿಸಿ ಒಂದು ಅಸದೃಶವಾದ (Unique) 14 ಅಂಕಿಯ ಖಾಯಂ ವಿಶ್ರಾಂತಿ ವೇತನ ಖಾತೆ ಸಂಖ್ಯೆ (PPAN-Permanent Pension Account Number)ಯನ್ನು ನೀಡತಕ್ಕದ್ದು. ಈ ಸಂಖ್ಯೆಯ ಮೊದಲ 2 ಅಂಕಿಗಳು ನಿಗಮದ ಸೇವೆಗೆ ಸೇರಿರುವ ಕ್ಯಾಲೆಂಡರ್ ವರ್ಷವನ್ನು ಸೂಚಿಸುತ್ತವೆ. ತರುವಾಯದ 3 ಅಂಕಿಗಳು ನಿಗಮದ/ಎಸ್ಕಾಂಗಳ ಸಂಕೇತ ಸಂಖ್ಯೆಯನ್ನು ಸೂಚಿಸುತ್ತವೆ. ನಂತರದ 3 ಅಂಕಿಗಳು ಲೆಕ್ಕ ಘಟಕಗಳ ಲೊಕೇಶನ್ ಸಂಖ್ಯೆಯನ್ನು ಸೂಚಿಸುತ್ತವೆ ಮತ್ತು ಕೊನೆಯ 6 ಅಂಕಿಗಳು ವ್ಯಕ್ತಿಗತ ನೌಕರನ ಅನುಕ್ರಮ ಸಂಖ್ಯೆಯಾಗಿರುತ್ತದೆ.

ಉದಾಹರಣೆ:- 2006ರಲ್ಲಿ ಬೆಸ್ಕಾಂನ ಪೂರ್ವ ವಿಭಾಗದಲ್ಲಿ ಸೇವೆಗೆ ಸೇರಿರುವ ಮೊದಲ ನೌಕರನಿಗೆ ಈ ಮುಂದಿನಂತೆ ಪಿಪಿಎಎನ್ ಸಂಖ್ಯೆಯನ್ನು ನೀಡಬಹುದಾಗಿದೆ.

| ವರ್ಷ | | ಇಲಾಖೆ ಮತ್ತು ಡಿಡಿಒ ಕೋಡ್ | | | | | | ನೌಕರನ ಕ್ರಮ ಸಂಖ್ಯೆ | | | | | |
|---|---|---|---|---|---|---|---|---|---|---|---|---|---|
| 0 | 6 | 7 | 5 | 0 | 4 | 0 | 5 | 0 | 0 | 0 | 0 | 0 | 1 |

ನೌಕರನ ಕ್ರಮ ಸಂಖ್ಯೆಯನ್ನು ಟ್ರಸ್ಟ್‌ಗಳು ಸಿಸ್ಟಂ ಮುಖಾಂತರ ಸೃಜಿಸತಕ್ಕದ್ದು ಮತ್ತು ಪೂರ್ಣ 14–ಅಂಕಿಗಳ ಸಂಕೇತ ಸಂಖ್ಯೆಯು ಪಿಪಿಎಎನ್ ಆಗಿರತಕ್ಕದ್ದು.

6. ಟ್ರಸ್ಟ್‌ಗಳು ಖಾಯಂ ವಿಶ್ರಾಂತಿ ವೇತನ ಖಾತೆ ಸಂಖ್ಯೆ (ಪಿಪಿಎಎನ್)ಯನ್ನು ನೀಡಿದ ನಂತರ, ಯಾರಿಗೆ ಅಸದೃಶವಾದ ಪಿಪಿಎಎನ್‌ಅನ್ನು ನೀಡಲಾಗಿದೆಯೋ ಆ ನೌಕರರ ಹಣ ತೆಗೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿವಾರು ಪಟ್ಟಿಯನ್ನು ಮುಂದಿನ ತಿಂಗಳ 15ನೇ ದಿನಾಂಕದೊಳಗೆ ಗೊತ್ತುಪಡಿಸಿದ ನಮೂನೆಯಲ್ಲಿ (ಅನುಬಂಧ–II) ಸಂಬಂಧಿಸಿದ ಆರ್ಥಿಕ ಸಲಹೆಗಾರರ ಕಛೇರಿಗೆ ಕಳುಹಿಸತಕ್ಕದ್ದು. ಆರ್ಥಿಕ ಸಲಹೆಗಾರರ ಕಛೇರಿಯವರು ತರುವಾಯದ ತಿಂಗಳ 20ನೇ ದಿನಾಂಕದೊಳಗೆ ಹಣ ತೆಗೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿವಾರು ಪಟ್ಟಿಯನ್ನು ಸಂಬಂಧಪಟ್ಟ ಲೆಕ್ಕ ಘಟಕಗಳಿಗೆ ವಿತರಿಸುವ ವ್ಯವಸ್ಥೆ ಮಾಡತಕ್ಕದ್ದು.

7. ಟ್ರಸ್ಟ್‌ಗಳು ಸೂಚಿ ವಹಿಯನ್ನು ಇಡತಕ್ಕದ್ದು. ಸೂಚಿವಹಿಯ ನಮೂನೆಯನ್ನು ಅನುಬಂಧ–III ರಲ್ಲಿ ಕೊಡಲಾಗಿದೆ.

8. ಈ ಯೋಜನೆಯ ಕೊಡುಗೆಗಾಗಿ ಮಾಡುವ ಕಟಾವಣೆಯನ್ನು 2007ರ ಜುಲೈ ತಿಂಗಳಿಗೆ ಸಂದಾಯ ಮಾಡಲಾಗುವ ವೇತನದಿಂದ ಪ್ರಾರಂಭಿಸತಕ್ಕದ್ದು.

9. 2006ರ ಏಪ್ರಿಲ್‌ನಿಂದ ಬರಬೇಕಾಗಿರುವ ಕೊಡುಗೆಗಳ ಬಾಕಿಗಳ ಕಟಾವಣೆಯನ್ನು ಕೂಡ 2007ರ ಜುಲೈ ತಿಂಗಳ ವೇತನದಿಂದ ಪ್ರಾರಂಭಿಸತಕ್ಕದ್ದು. ಆದರೆ ಪ್ರಚಲಿತ ತಿಂಗಳ ಕಟಾವಣೆಯೊಂದಿಗೆ ಒಂದು ತಿಂಗಳ ಬಾಕಿಯನ್ನು ಕಟಾವಣೆ ಮಾಡತಕ್ಕದ್ದು. ಅಂದರೆ, 2006ರ ಏಪ್ರಿಲ್ ತಿಂಗಳ ಕೊಡುಗೆಯ ಕಟಾವಣೆಯನ್ನು 2007ರ ಜುಲೈ ತಿಂಗಳ ಕಟಾವಣೆಯೊಂದಿಗೆ, 2006 ಮೆ ತಿಂಗಳ ಕೊಡುಗೆಯನ್ನು 2007ರ ಆಗಸ್ಟ್ ತಿಂಗಳ ಕೊಡುಗೆಯ ಕಟಾವಣೆಯೊಂದಿಗೆ, 2006ರ ಜೂನ್ ತಿಂಗಳ ಕೊಡುಗೆಯನ್ನು 2007 ಸೆಪ್ಟಂಬರ್ ತಿಂಗಳ ಕಟಾವಣೆಯೊಂದಿಗೆ, ಹೀಗೆ 2008ರ ಸೆಪ್ಟಂಬರ್ ವೇಳೆಗೆ ಸಂಪೂರ್ಣವಾಗಿ ಕಟಾವಣೆ ಮಾಡತಕ್ಕದ್ದು. ಏಪ್ರಿಲ್ 2006 ನಂತರ ಸೇವೆಗೆ ಸೇರಿದ ನೌಕರರ ವಿಷಯದಲ್ಲಿ, ಮೊದಲ ಬಾಕಿ ಕಟಾವಣೆಯನ್ನು 2007ರ ಜುಲೈ ತಿಂಗಳ ಕಟಾವಣೆಯೊಂದಿಗೆ ಮಾಡತಕ್ಕದ್ದು.

10. ಈ ಯೋಜನೆಯ ಕೊಡುಗೆಗಾಗಿ ಮಾಡುವ ಕಟಾವಣೆಯು ನೌಕರನ ಮೂಲ ವೇತನ ಮತ್ತು ಅದರ ಮೇಲೆ ದೊರೆಯುವ ತುಟ್ಟಿಭತ್ಯೆಯ ಮೊತ್ತದ ಮೇಲೆ ಶೇಕಡ 10ರಷ್ಟಾಗಿರತಕ್ಕದ್ದು. ನಿಗಮವು ತುಟ್ಟಿಭತ್ಯೆ ಮಂಜೂರು ಮಾಡಿದಾಗಲೆಲ್ಲಾ ಕೊಡುಗೆಯ ಕಟಾವಣೆಯನ್ನು ಪರಿಷ್ಕೃತ ತುಟ್ಟಿಭತ್ಯೆಯ ಆಧಾರದ ಮೇಲೆ ಮತ್ತು ಪರಿಷ್ಕೃತ ತುಟ್ಟಿಭತ್ಯೆ ಜಾರಿಗೆ ಬರುವ ದಿನಾಂಕದಿಂದ ಕಟಾವಣೆ ಮಾಡತಕ್ಕದ್ದು.

11. ಈ ಯೋಜನೆಯ ಕವಿಪ್ರನಿನಿ/ಎಸ್ಕಾಂಗಳು ನೀಡುವ ಸರಿಸಮನಾದ ಕೊಡುಗೆಯನ್ನು ಕೂಡ 1ನೇ ಏಪ್ರಿಲ್ 2006ರಿಂದ ಪರಿಣಮಿಸುವಂತೆ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಮೇಲೆ ಸಂದಾಯ ಮಾಡತಕ್ಕದ್ದು ಮತ್ತು ನೌಕರರಿಂದ ಕೊಡುಗೆಯ ಬಾಕಿಯನ್ನು ಕಟಾವಣೆ ಮಾಡುವ ವಿಧಾನವು ಕವಿಪ್ರನಿನಿ/ಎಸ್ಕಾಂಗಳು ಸಂದಾಯ ಮಾಡುವ ಸರಿಸಮನಾದ ಕೊಡುಗೆಯ ಬಾಕಿಗೂ ಸಮಾನಾಗಿ ಅನ್ವಯವಾಗತಕ್ಕದ್ದು.

12. ಕವಿಪ್ರನಿನಿ/ಎಸ್ಕಾಂಗಳು ಸರಿಸಮನಾದ ಕೊಡುಗೆಯ ಸಂದಾಯವು ಸಹ, ನಿಗಮವು ತುಟ್ಟಿಭತ್ಯೆಯ ಪರಿಷ್ಕರಣೆಯನ್ನು ಮಂಜೂರು ಮಾಡಿದಾಗಲೆಲ್ಲ ಪರಿಷ್ಕೃತ ತುಟ್ಟಿಭತ್ಯೆ ಮೇಲೆ ಮತ್ತು ಪರಿಷ್ಕೃತ ತುಟ್ಟಿಭತ್ಯೆಯು ಜಾರಿಗೆ ಬರುವ ದಿನಾಂಕದಿಂದ ಅನ್ವಯವಾಗತಕ್ಕದ್ದು.

13. ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯು ಕೊಡುಗೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ (ಅನುಬಂಧ–IV) ಕಟಾವಣೆ ಅನುಸೂಚಿಯನ್ನು ದ್ವಿಪ್ರತಿಯಲ್ಲಿ ಸಿದ್ಧಪಡಿಸಿ ಅವುಗಳನ್ನು ವೇತನ ಬಿಲ್ಲುಗಳಿಗೆ ಲಗತ್ತಿಸತಕ್ಕದ್ದು. ವೇತನ ಬಿಲ್ಲಿನಲ್ಲಿನ ಸಂವಾದಿ ಅಂಕಣದಲ್ಲಿ ತೋರಿಸಲಾದ ಕಟಾವಣೆಗಳ ಒಟ್ಟು ಮೊತ್ತದೊಂದಿಗೆ ಕೊಡುಗೆಗಳ ಮೊತ್ತವು ತಾಳೆಯಾಗಬೇಕು.

14. ವೇತನ ಬಿಲ್ಲಿನಲ್ಲಿ ವಿಶ್ರಾಂತಿ ವೇತನಕ್ಕೆ ಸಂಬಂಧಿಸಿದ ನೌಕರನ ಕೊಡುಗೆಯನ್ನು ಕಟಾವಣೆ ಮಾಡುವುದು ಮತ್ತು ಇದಕ್ಕೆ ಹೊಂದುವ ಆಯಾ ಕಂಪನಿಯ ಸರಿಸಮನಾದ ಕಟಾವಣೆ ಕೊಡಗೆಗಳೊಂದಿಗೆ ವೇತನ ಬಿಲ್ಲನ್ನು ಪಾಸು ಮಾಡುವುದು. ಹಾಗೂ ಕೊಡುಗೆಯ ಎರಡೂ ಮೊತ್ತಗಳನ್ನು ಸಂಬಂಧಿಸಿದ ಅನುಸೂಚಿಯನ್ನು ಲಗತ್ತಿಸಿ ಡಿ.ಡಿ.ಗಳ ಮುಖಾಂತರ ಸಂಬಂಧಿಸಿದ ಆರ್ಥಿಕ ಸಲಹೆಗಾರರ ಕಛೇರಿಗೆ ವರ್ಗಾಯಿಸುವುದು. ಡಿ.ಡಿ. ಕಮಿಷನ್ ಅನ್ನು (ಅವಶ್ಯವಿದ್ದಲ್ಲಿ) ಆಯಾ ಲೆಕ್ಕ ಘಟಕಗಳು ಭರಿಸತಕ್ಕದ್ದು.

15. ಆಯಾ ಆರ್ಥಿಕ ಸಲಹೆಗಾರರ ಕಛೇರಿಯವರು, ಅನುಬಂಧ–IV ರಲ್ಲಿ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯವರು ನೀಡಿರುವ ನೌಕರವಾರು ಕಟಾವಣೆಗಳನ್ನು ಹಾಗೂ ಸರಿಸಮಾನ ಕೊಡುಗೆಯ ಮೊತ್ತವನ್ನು ಕ್ರೋಢೀಕರಿಸಿ, ತಾಳೆ ನೋಡತಕ್ಕದ್ದು. ತಿಂಗಳ ಅಂಕಿ ಅಂಶಗಳ ಮಾಹಿತಿಯನ್ನು ಟ್ರಸ್ಟ್‌ಗಳಿಗೆ ವರ್ಗಾಯಿಸತಕ್ಕದ್ದು.

16. ಟ್ರಸ್ಟ್‌ಗಳು ಕಟಾವಣೆಗಳನ್ನು ಮತ್ತು ಕೊಡುಗೆಗಳನ್ನು ವ್ಯವಸ್ಥೆಗೊಳಿಸಿ ವೈಯಕ್ತಿಕ ಲೆಡ್ಜರ್ ಖಾತೆಯಲ್ಲಿ ನಿರ್ವಹಿಸತಕ್ಕದ್ದು. ಲೆಡ್ಜರ್ ಖಾತೆಗೆ ಗೊತ್ತುಪಡಿಸಿರುವ ನಮೂನೆಯನ್ನು ಅನುಬಂಧ–V ರಲ್ಲಿ ನೀಡಲಾಗಿವೆ.

17. ಹೊಸ ವಿಶ್ರಾಂತಿವೇತನ ಯೋಜನೆಯ ಅಡಿಯಲ್ಲಿ ಬರುವ ಯಾವುದೇ ನೌಕರನನ್ನು ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ವರ್ಗಾಯಿಸಿದಾಗ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯು, ವ್ಯಕ್ತಿಯ ಎಲ್‌ಪಿಸಿಯಲ್ಲಿ ಪಿಪಿಎಎನ್ ಅನ್ನು ಮತ್ತು ವಿಶ್ರಾಂತಿವೇತನ ನಿಧಿಗೆ ನೌಕರನ ಕೊಡುಗೆಯನ್ನು ಯಾವ ತಿಂಗಳಿನವರೆಗೆ ವಸೂಲು ಮಾಡುಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸತಕ್ಕದ್ದು.

18. ತಾತ್ಕಾಲಿಕ ವ್ಯವಸ್ಥೆಯ ಅವಧಿಯಲ್ಲಿ ಮೊತ್ತವನ್ನು ಹಿಂತೆಗೆದುಕೊಳ್ಳಲು ಅನುಮತಿಸತಕ್ಕದ್ದಲ್ಲ. ನೌಕರನ ಆಕಸ್ಮಿಕ ಮರಣದ ಸಂದರ್ಭದಲ್ಲಿ ಅಥವಾ ತಾತ್ಕಾಲಿಕ ಅವಧಿಯಲ್ಲಿ ಸೇವೆಯನ್ನು ಆತನು ಬಿಡುವ ಸಂದರ್ಭದಲ್ಲಿ, ಸೇವಾಂತ ಪಾವತಿಗಳಿಗೆ ಸಂಬಂಧಿಸಿದ ಏರ್ಪಾಡುಗಳ ಬಗ್ಗೆ ಸರ್ಕಾರವು ಈ ಬಗ್ಗೆ ಆದೇಶ ಹೊರಡಿಸಿದ ನಂತರ ಮುಂದೆ ಅಧಿಸೂಚಿಸಲಾಗುವುದು.

19. ಪ್ರತಿಯೊಂದು ಹಣಕಾಸು ವರ್ಷದ ಕೊನೆಯಲ್ಲಿ ಟ್ರಸ್ಟ್‌ಗಳು ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ, ಪ್ರಾರಂಭಿಕ ಶಿಲ್ಕು, ಮಾಸಿಕ ಕಟಾವಣೆಗಳ ವಿವರಗಳು ಮತ್ತು ಕವಿಪ್ರನಿನಿ/ಎಸ್ಕಾಂಗಳ ಕೊಡುಗೆ, ಗಳಿಸಿದ ಅಂದಾಜು ಬಡ್ಡಿ ಏನಾದರೂ ಇದ್ದಲ್ಲಿ, ಮತ್ತು ಮುಕ್ತಾಯ ಶಿಲ್ಕನ್ನು ತೋರಿಸುವ ವಾರ್ಷಿಕ ಲೆಕ್ಕಗಳ ವಿವರಣಾ ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು. ವಿವರಣಾ ಪಟ್ಟಿಗಳನ್ನು ಸಂಬಂಧಪಟ್ಟ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು, ಅವರು ಸೂಕ್ತ ಸ್ವೀಕೃತಿಯನ್ನು ಪಡೆದು ಖಾತೆಗಳ ವಿವರಣಾ ಪಟ್ಟಿಗಳನ್ನು ನೌಕರರಿಗೆ ನೀಡುವ ವ್ಯವಸ್ಥೆ ಮಾಡತಕ್ಕದ್ದು.

20. ಸ್ವತಂತ್ರ ವಿಶ್ರಾಂತಿವೇತನ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಮತ್ತು ನಿಧಿ ವ್ಯವಸ್ಥಾಪಕರನ್ನು ನೇಮಕ ಮಾಡಿದ ನಂತರ, ನಿಗಮವು ಶಿಲ್ಕುಗಳ ವರ್ಗಾವಣೆಯ ಬಗ್ಗೆ ವಿವರವಾದ ಸೂಚನೆಗಳನ್ನು ನೀಡುವುದು.

21. ಟ್ರಸ್ಟ್‌ಗಳು ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿವೇತನ ಯೋಜನೆಯಡಿ ಬರುವ ಎಲ್ಲ ಜಮೆಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ಖಾತೆಗಳಿಗೆ ತೆಗೆದುಕೊಳ್ಳದೆ ಬಾಕಿ ಉಳಿಸಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

22. ದಿನಾಂಕ: 01.04.2006 ಕ್ಕಿಂತ ಹಿಂದೆ ಕವಿಪ್ರನಿನಿ/ಎಸ್ಕಾಂಗಳಲ್ಲಿ ಖಾಯಂ ನೌಕರರಾಗಿದ್ದು, ಕವಿಪ್ರನಿನಿ/ಎಸ್ಕಾಂಗಳಲ್ಲಿನ ಹುದ್ದೆಗಳಿಗಾಗಿ ಸಮುಚಿತ ಮಾರ್ಗದಲ್ಲಿ ಅರ್ಜಿ ಸಲ್ಲಿಸಿ ಆಯ್ಕೆಗೊಂಡು ಸಂಬಂಧಪಟ್ಟ ಪ್ರಾಧಿಕಾರಿಯಿಂದ ಕರ್ತವ್ಯದಿಂದ ಬಿಡುಗಡೆ ಹೊಂದಿದ್ದರೆ ಅಥವಾ ನಿಯಮದ ಪ್ರಕಾರ ರಾಜಿನಾಮೆ ನೀಡಿ ಹೊಸ ಹುದ್ದೆಗೆ ದಿನಾಂಕ: 01.04.2006 ಅಥವಾ ತದನಂತರ ಸೇರ್ಪಡೆಯಾಗಿದ್ದರೆ, ಇವರನ್ನು ಹೊಸ ನೇಮಕಾತಿದಾರರೆಂದು ಪರಿಗಣಿಸತಕ್ಕದಲ್ಲ ಹಾಗೂ ಈ ನೌಕರರು ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ

ವಿಶ್ರಾಂತಿ ವೇತನ ಯೋಜನೆಗೆ ಒಳಪಡುವುದಿಲ್ಲ. ಕವಿಮಂ ನೌಕರರ ಸೇವಾ ನಿಬಂಧನೆಯಲ್ಲಿನ ಪಿಂಚಣಿ ಸೌಲಭ್ಯಕ್ಕೆ ಇವರ ಅರ್ಹತೆಯು ಮುಂದುವರೆಯುತ್ತದೆ.

23. ಲೆಕ್ಕ ನಿರ್ವಹಣಾ ವಿಧಾನದ ಬಗ್ಗೆ ಸ್ಪಷ್ಟೀಕರಣಗಳೇನಾದರೂ ಬೇಕಾಗಿದ್ದಲ್ಲಿ, ಅವುಗಳನ್ನು ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಕಛೇರಿಯಿಂದ ಪಡೆಯಬಹುದು.

ಆದೇಶದ ಮೇರೆಗೆ,

2.8.2008

ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.ಅ)
ಕವಿಪ್ರನಿನಿ

ಗೆ:

1. ಶ್ರೀ.ವಿ.ನಾರಾಯಣಗೌಡ, ನಿರ್ದೇಶಕರು(ಲೇಬರ್), ಕವಿಪ್ರನಿನಿ, ಬೆಂಗಳೂರು.
2. ಶ್ರೀ.ಬಿ.ಎಸ್.ಸತ್ಯಪ್ರೇಮಕುಮಾರ್, ನಿರ್ದೇಶಕರು, ಸೆಸ್ಕೊ, ಮೆಸ್ಕಾಂ, ಹೆಸ್ಕಾಂ ಮತ್ತು ಜೆಸ್ಕಾಂ.
3. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂಗಳು.
6. ಎಲ್ಲಾ ಅಧೀಕ್ಷಕ ಇಂಜನಿಯರ್‌ಗಳು, ಕವಿಪ್ರನಿನಿ/ ಎಸ್ಕಾಂಗಳು.
7. ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
8. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್‌ಗಳು, ಕವಿಪ್ರನಿನಿ/ ಎಸ್ಕಾಂಗಳು.
9. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
10. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು ಹಾಗೂ ವಿ.ವಿ.ನಿ.ನಿ./ ನಿರ್ದೇಶಕರು(ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಕಾನೂನು), ಕವಿಪ್ರನಿನಿ.
11. ಆಪ್ತ ಕಾರ್ಯದರ್ಶಿಗಳು, ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಕವಿಪ್ರನಿನಿ, ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳು.
12. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ.
13. ಎಸ್.ಎ.-II ದಾಖಲೆಗಳು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:

1. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ. ನೌಕರರ ಸಂಘ (ನೋ.ಸಂ. 659).
2. ಪ್ರಧಾನ ಕಾರ್ಯದರ್ಶಿ, ಕವಿಮಂ. ಇಂಜನಿಯರುಗಳ ಸಂಘ.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ. ಲೆಕ್ಕಾಧಿಕಾರಿಗಳ ಸಂಘ.
4. ಪ್ರಧಾನ ಕಾರ್ಯದರ್ಶಿ, ಕವಿಮಂ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ಂ), ಕೇಂದ್ರ ಸಮಿತಿ.

46

# ಅನುಬಂಧ – I

(ನೌಕರನು ಒದಗಿಸಬೇಕಾದ ವಿವರಗಳು)

ನೌಕರನ ಹೆಸರು
(ದಿಡಿ ಅಕ್ಷರಗಳಲ್ಲಿ) :

ಪದನಾಮ :

ವೇತನ ಶ್ರೇಣಿ :

ಜನ್ಮ ದಿನಾಂಕ :

ಸೇವೆಗೆ ಸೇರಿದ ದಿನಾಂಕ :

ಮೂಲ ವೇತನ :

ವಿಶ್ರಾಂತಿ ವೇತನ ಖಾತೆಯಲ್ಲಿ ಸಂಚಯಗೊಂಡ
ಹಣಕ್ಕೆ ನಾಮ ನಿರ್ದೇಶಿತ :

| ಕ್ರಮ ಸಂಖ್ಯೆ | ನಾಮನಿರ್ದೇಶಿತನ (ರ) ಹೆಸರು | ವಯಸ್ಸು (ಜನ್ಮದಿನಾಂಕ) | ಸಂದಾಯ ಮಾಡಬಹುದಾದ ಪಾಲಿನ ಶೇಕಡಾ ಪ್ರಮಾಣ | ನೌಕರನೊಂದಿಗೆ ಇರುವ ಸಂಬಂಧ |
|---|---|---|---|---|
| | | | | |

ನೌಕರನ ಸಹಿ

ಹಣ.ಕೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ಸಹಿ

ಕಚೇರಿಯ ಮೊಹರು

443

## ಅನುಬಂಧ – II

(ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳ ವೇತನ ಬಟವಾಡೆ ಮಾಡುವ ಅಧಿಕಾರಿಗಳು ಟ್ರಸ್ಟ್‌ಗಳಿಗೆ ಕಳುಹಿಸಬೇಕಾಗಿರುವ ಮಾಹಿತಿಯ ನಮೂನೆ)

ವೇತನ ಬಿಲ್ ಪಾಸು ಮಾಡುವ ಕಛೇರಿ ಹೆಸರು / ಲೊಕೇಶನ್ ಸಂಖ್ಯೆ :

| ಕ್ರ ಸಂ. | ನೌಕರನ ಹೆಸರು | ಜನ್ಮ ದಿನಾಂಕ | ಕಛೇರಿ ಹಂಚಿಕೆ ಮಾಡಿರುವ ಅಸದೃಶ ಪಿಪಿಎಎನ್ | ಪದನಾಮ | ಮೂಲ ವೇತನ | ಸೇವೆಗೆ ಸೇರಿದ ದಿನಾಂಕ | ವಿಶ್ರಾಂತಿ ವೇತನ ಖಾತೆಯಲ್ಲಿ ಸಂಚಯಗೊಂಡಿರುವ ಹಣಕ್ಕೆ ನಾಮನಿರ್ದೇಶಿತನ (ರ) ವಿವರಗಳು | | | |
|---|---|---|---|---|---|---|---|---|---|---|
| | | | | | | | ನಾಮ ನಿರ್ದೇಶಿತನ (ರ) ಹೆಸರು | ವಯಸ್ಸು/ ಜನ್ಮ ದಿನಾಂಕ | ನೌಕರ ನೊಂದಿಗೆ ಇರುವ ಸಂಬಂಧ | ಪಾಲಿನ ಶೇಕಡಾ ಪ್ರಮಾಣ |
| | | | | | | | | | | |

ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ಸಹಿ

ಕಛೇರಿ ಮೊಹರು

ಅನುಬಂಧ – III

ಸೂಚಿ ವಹಿ (ಟ್ರಸ್ಟ್‌ಗಳು ನಿರ್ವಹಿಸಬೇಕಾದದ್ದು)

| ಅಸದೃಶ ಪಿಪಿಎಎನ್ | ನೌಕರನ ಹೆಸರು | ಪದನಾಮ | ಸೇವೆಗೆ ಸೇರಿದಂಥ ಕಛೇರಿಯ ಹೆಸರು (ಡಿಡಿಓ) | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಷರಾ |
|---|---|---|---|---|---|---|
| | | | | | | |

## ಅನುಬಂಧ -IV

ಹೊಸ ವಿಶ್ರಾಂತಿ ವೇತನ ಯೊಜನೆಯ ಹಂತ – I ಮತ್ತು ಹಂತ –II ಕ್ಕೆ ನೌಕರನ ಅಂಶದಾಯಿ ಕೊಡುಗೆಯನ್ನು ತೋರಿಸುವ ನಮೂನೆ)

(ಇದನ್ನು ವೇತನ ಬಿಲ್ಲಿಗೆ ಲಗತ್ತಿಸಬೇಕು)

ಡಿ.ಡಿ.ಓ.ರವರ ಹೆಸರು / ಸಂಕೇತ ಸಂಖ್ಯೆ :

| ಟ್ರಸ್ಟ್ ಹಂಚಿಕೆ ಮಾಡಿರುವ ಅಸದೃಶ ಪಿಪಿಎಎನ್ ಸಂಖ್ಯೆ | ನೌಕರನ ಹೆಸರು | ಪದನಾಮ | ಮೂಲ ವೇತನ | ತುಟ್ಟಿ ಭತ್ಯೆ | ಕೊಡುಗೆ | ಷರಾ |
|---|---|---|---|---|---|---|
| | | | | | | |

(---------------------------------------------- ರೂಪಾಯಿಗಳು)

ಹಣ ತೆಗೆಯುವ ಅಧಿಕಾರಿಯ ಸಹಿ ಮತ್ತು ದಿನಾಂಕ

ಪದನಾಮ

## ಅನುಬಂಧ –V

(ಹೊಸ ವಿಶ್ರಾಂತಿ ವೇತನ ಯೋಜನೆಯ ಲೆಡ್ಜರ್.ಹಾಳೆ (ಟ್ರಸ್ಟ್‌ಗಳು ನಿರ್ವಹಿಸಬೇಕಾದುದು)

ಹೆಸರು : ಶ್ರೀ/ ಶ್ರೀಮತಿ / ಕುಮಾರಿ

ಪದನಾಮ ಕಛೇರಿ

ಟ್ರಸ್ಟ್‌ನಿಂದ ಹಂಚಿಕೆ ಮಾಡಿರುವ ಅಸದೃಶ ಪಿಪಿಎಎನ್

ಸೇವೆಗೆ ಸೇರಿದ ದಿನಾಂಕ

ವಯೋನಿವೃತ್ತಿ ದಿನಾಂಕ

| ತಿಂಗಳು | ಮೂಲ ವೇತನ | ತುಟ್ಟಿ ಭತ್ಯೆ | ನೌಕರನ ಕೊಡುಗೆ * | ನಿಗಮ/ಎಸ್ಕಾಂಗಳ ಕೊಡುಗೆ | ಒಟ್ಟು | ಷರಾ | | |
|---|---|---|---|---|---|---|---|---|
| ಏಪ್ರಿಲ್ | | | | | | ------------ ರಂದು | ಹಂತ–I (ರೂ) | ಹಂತ–II (ರೂ) |
| ಮೇ | | | | | | ಇದ್ದಂತೆ ಆರಂಭಿಕ ಶಿಲ್ಕು | | |
| ಜೂನ್ | | | | | | | | |
| ಜುಲೈ | | | | | | ಹಿಂತೆಗೆತಗಳು | | |
| ಆಗಸ್ಟ್ | | | | | | ಬಡ್ಡಿ | | |
| ಸೆಪ್ಟೆಂಬರ್ | | | | | | ------------ | | |
| ಅಕ್ಟೋಬರ್ | | | | | | ರಂದು ಇದ್ದಂತೆ ಮುಕ್ತಾಯದ ಶಿಲ್ಕು | | |
| ನವೆಂಬರ್ | | | | | | ನಮೂದಿಸಿದವರು : | | |
| ಡಿಸೆಂಬರ್ | | | | | | ಪರಿಶೀಲಿಸಿದವರು : | | |
| ಜನವರಿ | | | | | | ಪರೀಕ್ಷಿಸಿದವರು : | | |
| ಫೆಬ್ರವರಿ. | | | | | | | | |
| ಮಾರ್ಚ್ | | | | | | | | |
| ಒಟ್ಟು (ರೂ) | | | | | | | | |
| | | | | | | | | |

* ಹಿಂತೆಗೆಯಲು ಅನುಮತಿಸಲಾಗುವುದಿಲ್ಲ.

448

## ಅನುಬಂಧ –VI

(ಹೊಸ ವಿಶ್ರಾಂತಿ ವೇತನ ಯೋಜನೆಯ ಹಂತ –Iಕ್ಕೆ ನೌಕರನ ಅಂಶದಾಯಿ ಕೊಡುಗೆಯನ್ನು ತೋರಿಸುವ ನಮೂನೆ)

(ನಿಗಮದ ಕೊಡುಗೆಯನ್ನು ತೆಗೆಯುವ ಬಿಲ್ಲಿಗೆ ಇದನ್ನು ಲಗತ್ತಿಸಬೇಕು)

| ಟ್ರಸ್ಟಿನವರು ನೀಡಿದ ಅಸದೃಶ ಪಿಪಿಎಎನ್ ಸಂ. | ನೌಕರನ ಹೆಸರು | ಪದನಾಮ | ಮೂಲ ವೇತನ | ತುಟ್ಟಿ ಭತ್ಯೆ | ನಿಗಮದ ಕೊಡುಗೆ | ಷರಾ |
|---|---|---|---|---|---|---|
| | | | | | | |

(---------------------------------------------------------ರೂಪಾಯಿಗಳು)

ಅಧಿಕಾರಿಯ ಸಹಿ ಮತ್ತು ದಿನಾಂಕ

ಪದನಾಮ